ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ ಕೆ.ಇ.ಬಿ. ಯವರು ಕನೆಕ್ಷನ್ ತೆಗೆದುಕೊಳ್ಳ ಬೇಕಾದರೆ ಲ್ಯಾಂಡ್‌ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಯಾರು ಸಾಲ ತೆಗೆದುಕೊಂಡಿರುತ್ತಾರೆ ಅವರಿಗೆ ಅಧ್ಯತೆಯನ್ನು ಕೊಡುತ್ತಿದ್ದಾರೆ. ಉಳಿದವರಿಗೆ ಅಧ್ಯತೆಯು ಇಲ್ಲವಾಗಿದೆ. ರೈತರು ಯಾವ ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡಿದ್ದರೂ ಕೂಡ ಅವರಿಗೆ ಕನೆಕ್ಷನ್ ಸಿಗುವಂತಹ ವ್ಯವಸ್ಥೆಯಾಗ ಬೇಕೆಂದು ಹೇಳುತ್ತೇನೆ.

(ಶ್ರೀಮತಿ ಮೋಟಮ್ಮನವರು ತಮ್ಮ ಆಸನ ಬಿಟ್ಟು ಹೋಗುತ್ತಿದ್ದುದನ್ನು ಮಾನ್ಯ ಅಧ್ಯಕ್ಷರು ಗಮನಿಸಿದರು)

ಅಧ್ಯಕ್ಷರು : ಶ್ರೀಮತಿ ಮೋಟಮ್ಮನವರೇ ಮೂಡಿಗೆರೆ ಮಧ್ಯಂತರ ಮಂಡಲ ಪಂಚಾಯಿತಿಯ ವಿಚಾರವನ್ನು ಹೇಳಿ ತಮ್ಮ ಪುಸ್ತಕಗಳನ್ನು ಜೋಡಿಸಿಕೊಂಡು ಹೋಗುತ್ತಿದ್ದೀರಲ್ಲ ದಯಮಾಡಿ ಕುಳಿತುಕೊಳ್ಳಿ ಈಗ ನಿಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ

(ನಗು)

ಶ್ರೀ ಎಂ. ವೀರಪ್ಪ ಮೋಯಿಲಿ (ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ ಸದಸ್ಯರುಗಳು ವಿದ್ಯುಚ್ಛಕ್ತಿ ಇಲಾಖೆಯ ಬಗ್ಗೆ ವಿದ್ಯುತ್ ನಿಲುಗಡೆಯ ಬಗ್ಗೆ ಮತ್ತು ಅದರಲ್ಲಿನ ಅನೇಕ ಲೋಪದೋಷಗಳ ಬಗ್ಗೆ ಬಹಳ ಗಂಭೀರವಾದಂಥ ಪ್ರಶ್ನೆಗಳನ್ನು ಎತ್ತಿದ್ದಾರೆ. ಮಾನ್ಯ ಸದಸ್ಯರಾದ ಪ್ರೊಃ ನಂಜುಂಡಸ್ವಾಮಿಯವರು ಸರಕಾರಕ್ಕೆ ಜನ ಸಾಮಾನ್ಯರ ಪ್ರಶ್ನೆಗಳು ಸಮಸ್ಯೆಗಳು ಅರ್ಥವಾಗುತ್ತಾ ಇಲ್ಲ ಎಂದು ಹೇಳಿದ್ದಾರೆ. ಸರಕಾರಕ್ಕೆ ಜನಸಾಮಾನ್ಯರ ಎಲ್ಲಾ ಸಮಸ್ಯೆಗಳೂ ಅರ್ಥವಾಗುತ್ತಿವೆ

ಅಧ್ಯಕ್ಷರು: ಪ್ರೊ. ನಂಜುಂಡಸ್ವಾಮಿಯವರು ಸರಕಾರಕ್ಕೆ ಪಂಚೇಂದ್ರಿಯಗಳೇ ಇಲ್ಲ ಎಂದು ಹೇಳುತ್ತಿದ್ದಾರೆ. ನೀವು ಇದೆ ಎಂದು ಸ್ಪಷ್ಟಿಪಡಿಸಿ ಮಾಡುತ್ತಾ ಇದ್ದೀರಿ.

ಶ್ರೀ ವೀರಪ್ಪ ಮೊಯಿಲಿ: ಅದು ಅವರಿಗೆ ಗೊತ್ತಿದೆ ಈಗ ಸರಕಾರ ಸಮಗ್ರವಾಗಿ ಪರಿಶೀಲನೆ ಮಾಡುತ್ತಾ ಇದೆ ಈ ಬಗ್ಗೆ ಕುರಿತು ಅನೇಕ ಸಮಸ್ಯೆಗಳು ಇವೆ. 6 ಗಂಟೆಗಳ ವಿದ್ಯುತ್‌ಚ್ಛಕ್ತಿ ನಿಲುಗಡೆ ಪ್ರಶ್ನೆ ಮತ್ತು ಮಾನ್ಯ ಬೈರೇಗೌಡದ ಜಿಲ್ಲೆಯ ವಿಚಾರದಲ್ಲಿ ಸಂಬಂಧಪಟ್ಟಂತೆ ಅನೇಕ ಸಮಸ್ಯೆಗಳು ಇವೆ. ಇಂಥ ಅನೇಕ ಸಮಸ್ಯೆಗಳು ಸರ್ವತ್ರಿಕವಾಗಿ ಇವೆ. ಅದೇ ಪ್ರಕಾರ ಕೆಲವು ಕಡೆಗಳಲ್ಲಿ ತೀಕ್ಷ್ಣವಾದಂಥ ಪ್ರಶ್ನೆಗಳು ಕೂಡ ಉದ್ಭವವಾಗಿದೆ. ಅದರ ಬಗ್ಗೆ ಈಗ ಎಲ್ಲಾ ರೀತಿಯ ವಿಶ್ಲೇಷಣೆ ಮಾಡಿ ಹೇಳಲು ನಾನು ಇಷ್ಟ ಪಡುವುದಿಲ್ಲ ಏಕೆಂದರೆ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಇದಕ್ಕೆ ವ್ಯವಸ್ಥಿತವಾದಂಥ ಕಾರ್ಯಕ್ರಮಗಳನ್ನು ರೂಪಿಸಬೇಕು ಅದನ್ನು ಹೈಯೆಸ್ಟ್ ಲೆವಲ್‌ನಲ್ಲಿ ಮಾನಿಟರ್ ಮಾಬೇಕೆಂದು ಹೇಳಿ ಸರಕಾರ ಇದರ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಂಡಿದೆ. ಅದಕ್ಕಾಗಿ ನಾನು ಫೀಸ್ ಮೇಲ್ ಆಗಿ ಉತ್ತರ ಕೊಡುವ ಬದಲು ಈ ದಿನ ಒಂದು ಸದನ ಏಳುವ ಮೊದಲು ವಿವರವಾದಂಥ ಒಂದು ಹೇಳಿಕೆಯನ್ನು ಈ ಸದನಕ್ಕೆ ಕೊಡುತ್ತೇನೆ.

ಎನ್.ಜಿ.ಇ.ಎಫ್. ಹಗರಣದ ಬಗ್ಗೆ

ಶ್ರೀ ಸಿ ಬೈರೇಗೌಡ : ಮಾನ್ಯ ಅಧ್ಯಕ್ಷರೆ ನಿಯಮ 68ರ ಮೇರೆಗೆ ನಮ್ಮ ರಾಜ್ಯದಲ್ಲಿರತಕ್ಕಂಥ ಸರಕಾರಿ ಸ್ವಾಮ್ಯದ ಉದ್ದಿಮೆ ಆದ ಎನ್.ಜಿ.ಇ.ಎಫ್. ಬಗ್ಗೆ ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಂಡಿದ್ದೆ. ಅದಕ್ಕೆ ನಮ್ಮ ಸ್ನೇಹಿತರಾದಂಥ ವಾಟಾಳ್ ನಾಗರಾಜ್‌ರವರು

ವೆಂಕಟೇಶ್‌ರವರು ಮತ್ತು ಯಾಡಿಯೂರಪ್ಪನವರು ಕೂಡ ಸಹಿ ಮಾಡಿದ್ದಾರೆ. ಈ ಎನ್.ಜಿ.ಇ.ಎಫ್. ಸಂಸ್ಥೆಯು ನಮ್ಮ ರಾಜ್ಯದ ಪ್ರತಿಷ್ಟೆಯ ಉದ್ದಿಮೆಯಾಗಿದೆ. ಹಿಂದೆ ಇದ್ದಂಥ ಆಡಳಿತ ವರ್ಗದವರು ಈ ಸಂಸ್ಥೆಯನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಬಂದ್ದಿದ್ದರು. ಅದು ಸತತವಾಗಿ ಲಾಭದಾಯಕವಾಗಿ ನಡೆಯುತ್ತಾ ಇತ್ತು. ಆದರೆ 1983ರಲ್ಲಿ ಈ ಸಂಸ್ಥೆಗೆ ಆಪತ್ತು ಒದಗಿ ಬಂತು ಆಗ ಒಬ್ಬ ಹಿರಿಯ ಐ.ಎ.ಎಸ್. ಅಧಿಕಾರಿಯನ್ನು ಅಲ್ಲಿಗೆ ಚೇರ್‌ಮನ್ ಮತ್ತು ಎಂ.ಡಿ ಯನ್ನಾಗಿ ನೇಮಕ ಮಾಡಿದರು. ಅವರನ್ನು ನೇಮಕವಾದ ತಕ್ಷಣ ಈ ಸಂಸ್ಥೆಗೆ ಆಪತ್ತು ಒದಗಿತು. ಆ ಬಗ್ಗೆ ಇಲ್ಲಿ ಅನೇಕ ಬಾರಿ ಚರ್ಚೆಯಾಗಿದ್ದು ಅದನ್ನು ನಾನು ಈಗ ಪುನಃ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ನಡೆದ ಚರ್ಚೆಗೆ ಉತ್ತರವನ್ನು ಈ ಸದನದಲ್ಲಿ ಅನೇಕ ಭಾರಿ ಸರಕಾರದವರು ಕೊಟ್ಟಿದ್ದಾರೆ ಇವ್ಯೊತ್ತು ನಾನು ಪ್ರಮುಖವಾಗಿ ಚರ್ಚೆ ಮಾಡತಕ್ಕಂಥಾದ್ದು ಏನೆಂದರೆ ಈ ಅಧಿಕಾರಿಯ ಮೇಲೆ ಅನೇಕ ವಿಚಾರಣೆಗಳು ನಡೆದಿವೆ. ಪ್ರಮುಖಾವಾಗಿ ಟಾರ್ಪೆಡೋಗಳ ಸರಬರಾಜಿನಲ್ಲಿ. ನಡೆದ.....

ಅಧ್ಯಕ್ಷರು : ತಾವು ಅಷ್ಟು ವಿವರವಾಗಿ ಹೋಗುವುದು ಬೇಡ. ನೀವು ಟಾರ್ಪೇಡೋಗೆ ಹೋದರೆ ನಾನು ಇದನ್ನು ಟಾರ್ಪೋಡೋ ಮಾಡಬೇಕಾಗುತ್ತದೆ. ಮುಖ್ಯವಾಗಿರತಕ್ಕಂಥ ವಿಷಯವನ್ನು ಮಾತ್ರ ತಾವುಗಳು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ ಎನ್.ಜಿ.ಇ.ಎಫ್. ಹಗರಣದ ಬಗ್ಗೆ ನಾವು ಇಲ್ಲಿ ಅನೇಕ ಬಾರಿ ಚರ್ಚೆ ಮಾಡಿದ್ದೇನೆ. ಅಲ್ಲಿನ ಅನೇಕ ಭ್ರಷ್ಟಾಚಾರಗಳ ಬಗ್ಗೆ ಸರಕಾರದ ಗಮನಕ್ಕೆ ತರಬೇಕೆಂದಿದ್ದೇವೆ. ಅದುದರಿಂದ ಈಗ ಅದಕ್ಕೆ ತಾವು ವಿಶೇಷವಾದಂಥ ಒಂದು ಸಂದರ್ಭವನ್ನು ಚರ್ಚೆಗಾಗಿ ಮಾಡಿಕೊಟ್ಟರೆ ಮಾತ್ರ ಅದರಿಂದ ಬಹಳ ಅನುಕೂಲವಾಗುತ್ತದೆ. ಇಂತಹ ಅನೇಕ ಕಾರ್ಖಾನೆಗಳು ಹೀಗೆ ಕೋಟ್ಯಾಂತರ ರೂಪಾಯಿಗಳ ನಷ್ಟವನ್ನು ಮಾಡಿಕೊಂಡು ಬರುತ್ತಿವೆ. ಎನ್.ಜಿ.ಇ.ಎಫ್. ಹಿಂದೆ ಇದ್ದವರು ಲಾಭದಾಯಕವಾಗಿ ನಡೆಸಿಕೊಂಡು ಹೋಗಿದ್ದರು. ಆದರೆ ಈಗ ಅಲ್ಲಿ ಕೋಟ್ಯಾಂತರ ರೂಪಾಯಿಗಳವರೆಗೆ ಲೂಟಿ ಆಗುತ್ತಿದೆ ಇದರ ಬಗ್ಗೆ ವಿವರವಾದ ಚರ್ಚೆಯಾಗಬೇಕು. ದಯಮಾಡಿ ಅವಕಾಶವನ್ನು ಕೊಡಿ

ಅಧ್ಯಕ್ಷರು : ಅವಕಾಶ ಮಾಡಿಕೊಡುತ್ತೇನೆ ಆದರೆ ಇದೇನು ಹೊಸದಲ್ಲ

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಈ ವಿಷಯಕ್ಕೆ ಒಂದು ಇತಿಶ್ರೀಯನ್ನು ಹಾಕಬೇಕಾಗಿದೆ. ಈ ಬಗ್ಗೆ ಜಯರಾಂ ಸಮಿತಿ ಎಂದು ಮಾಡಿ ಅವರು ಒಂದು ವರದಿ ಕೂಡ ಕೊಟ್ಟಿದ್ದಾರೆ. ಅದರ ಬಗ್ಗೆ ಇಲ್ಲಿ ಚರ್ಚೆ ಆಗಬೇಕಾಗಿದೆ. ಈ ಕಾರ್ಖಾನೆಯು ನಮ್ಮ ರಾಜ್ಯದ ಹೆಮ್ಮೆಯ ಕಾರ್ಖಾನೆಯಾಗಿದೆ. ಇದು ಪ್ರಗತಿಪರವಾಗಿ ನಡೆದುಕೊಂಡು ಮುಂದಕ್ಕೆ ಹೋಗಬೇಕು. ಆದರೆ ಇದರ ಅಭಿವೃದ್ದಿ ಈಗ ಕುಂಠಿತವಾಗಿದೆ. ಇದರ ಹಿಂದೆ ಇರತಕ್ಕಂಥ ಹಿತಾಸಕ್ತಿಗಳು ಯಾರು ಇದ್ದಾರೆ ಯಾರಿಂದ ಅದು ನಷ್ಟವನ್ನು ಅನುಭವಿಸುತ್ತಿದೆ ಎಂಬ ಬಗ್ಗೆ ವಿವರವಾದ ಚರ್ಚೆಯಾಗಬೇಕು. ದಯಮಾಡಿ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಕಲುಬುರ್ಗಿಯ ವಿಶ್ವವಿದ್ಯಾನಿಲಯದಲ್ಲಿ ಒಬ್ಬ ಪ್ರಾಧ್ಯಪಕರ ಮೇಲೆ ಹಲ್ಲೆ ಆಗಿದೆ. ಆದನ್ನು ಖಂಡಿಸಿ ನಾನು ನಿಮಗೆ ಒಂದು ನೋಟೀಸ್ ಕೊಟ್ಟಿದ್ದೇನೆ.

ಘಟಪ್ರಭಾ ಎಡದಂಡೆ ನಾಲಾದಿಂದ ನೀರು ನಿಲ್ಲಿಸಿರುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ ನಿನ್ನೆದಿನ ನಾನು ಒಂದು ನಿಲುವಳಿಯ ಸೂಚನೆಕೊಟ್ಟಿದೆ. ಬಿಜಾಪುರ ಜಿಲ್ಲಾ ಬಿಳಗಿ ತಾಲ್ಲೂಕಿನಲ್ಲಿಯ ಘಟಪ್ರಭಾ ಎಡದಂಡೆ ನೀರು ನಿಲ್ಲಿಸಿದ ಬಗ್ಗೆ ಬಾಬಾಗೌಡ ಪಾಟೀಲರು ಕೂಡ ನಿನ್ನೆ ದಿವಸ ಪ್ರಸ್ತಾಪಿಸಿದ್ದುರು ಇದು ಬಹಳ ಮುಖ್ಯವಾದ ವಿಷಯ ಅಲ್ಲಿ ಕಳೆದ 15 ದಿವಸಗಳಿಂದ ರೈತರುಗಳು ಮುಷ್ಕರ ಮಾಡುತ್ತಾ ಇದ್ದಾರೆ. ಈ ಬಗ್ಗೆ ತಮಗೆ ನೋಟೀಸ್ ಕೊಡ ಕಳುಹಿಸಿಕೊಟ್ಟಿದ್ದೇನೆ. ಕಾನೂನಿನ ಪರಿಸ್ಥಿತಿಯು ಅಲ್ಲಿ ಉದ್ಭವವಾಗತಕ್ಕಂಥ ಒಂದು ಸನ್ನಿವೇಶ ಇದೆ. ಈ ಸಂದರ್ಭದಲ್ಲಿ ನಾನು ಸರಕಾರದವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಅಲ್ಲಿ ಮೇಲುಗಡೆ ಇರತಕ್ಕಂಥ ರೈತರು ಎರಡು ಬೆಳೆ ಬೆಳೆಯುತ್ತಾರೆ. ಕೊನೆಭಾಗದವರಿಗೆ ನೀರು ಸರಬರಾಜು ಸರಿಯಾಗಿಲ್ಲ. ಅಲ್ಲಿ ಹೋದ ವರ್ಷ ಕೂಡ ಬೆಳೆ ಆಗಿಲ್ಲ. ಈ ವರ್ಷ ಕೂಡ ನೀರು ಇಲ್ಲದೆ ಸುಮಾರು 10 ಕೋಟಿ ರೂಪಾಯಿಗಳಷ್ಟು ಬೆಳೆ ಅಲ್ಲಿ ಉಳಿದುಕೊಂಡಿದೆ. ನೀರು ಇಲ್ಲದೇ ಅಷ್ಟು ಬೆಳೆ ಹಾಳಾಗಿ ಹೋಗುವ ಒಂದು ಸ್ಥಿತಿ ಬರಬಾರದು. ಅದಕ್ಕಾಗಿ ಸೂಕ್ತ ಕ್ರಮವನ್ನು ಕೂಡಲೇ ಸರಕಾರದರವರು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ನಾಲಾ ಕೊನೆಯ ಬಯಲಿನಲ್ಲಿ ಇರತಕ್ಕಂಥ ಪ್ರದೇಶಗಳ ಪರಿಸ್ಥಿತಿಯು ಎಲ್ಲಾ ಕಡೆಯೂ ಒಂದೇ ಆಗಿರುತ್ತದೆ. ಅದು ಬಿಳಗಿ ಆಗಿರಲಿ ಅಥವಾ ಮದ್ದೂರು ಆಗಿರಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ ಈ ಸೂಚನೆಯ ಮೇಲೆ ನಮಗೆ ಮಾತನಾಡಲು ಅವಕಾಶ ಕೊಡಿ. ಏಕೆಂದರೆ ಇವೊತ್ತು ಸದನ ಮುಗಿದು ಮತ್ತೆ ಯಾವಾಗ ಸೇರುತ್ತದೋ ನಮಗೆ ಗೊತ್ತಿಲ್ಲ.

ಅಧ್ಯಕ್ಷರು : ಯಾವಾಗ ಸೇರುತ್ತದೆ ಎಂಬುದನ್ನು ನಾವು ತಮಗೆ ತಿಳಿಸುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಷ್ಟರಲ್ಲಿ ಅಲ್ಲಿಯ ಬೆಳೆಯಲ್ಲಾ ಹಾಳಾಗಿ ಹೋಗುತ್ತದೆ. ಈ ಕುರಿತು ಸರಕಾರದ ವತಿಯಿಂದ ಒಂದು ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ.

ಅಧ್ಯಕ್ಷರು : ಬಾಬಾಗೌಡ ಪಾಟೀಲರು ಇದನ್ನು ಹೇಳಿದ್ದಾರೆ ಈಗ ಏನಾದರು ಹೇಳುವುದಿದ್ದರೆ ಹೇಳಲಿ.

ಶ್ರೀ ಬಾಬಾಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ ಅಲ್ಲಿ ಅಧಿಕೃತ ಬೆಳೆಗೆ ನೀರು ಇಲ್ಲ ಆದರೆ ಅನಿಧಿಕೃತ ಬೆಳೆಗೆ ನೀರು ಕೊಡಬೇಕೆಂದು ಅಲ್ಲಿ ರಾಜಕೀಯ ನಡೆಯುತ್ತಿದೆ ಅಲ್ಲಿಯ ಎಕ್ಸಿಕ್ಯುಟಿವ್ ಇಂಜಿನೀಯರ್‌ರವರು ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ ತಾವು ಜನರಿಗೆ ಮುಖ ತೋರಿಸುವುದು ಹೇಗೆ? ಎಂದು ರಜೆ ತೆಗೆದುಕೊಂಡು ಹೋಗಿ ಬಿಟ್ಟಿದ್ದಾರೆ. ಅಲ್ಲಿ ಅಧಿಕೃತ ಮತ್ತು ಅನಧಿಕೃತ ಬೆಳೆಗಳಿಗೆ ನೀರು ಕೊಡಲು ಸಾಕಷ್ಟು ನೀರಿಲ್ಲ. ಈಗ ಪೈರು ಹಾಳಾಗಿ ಹೋಗುತ್ತಿರುವುದು ಗೊತ್ತಿದ್ದೂ ಮಾನವೀಯತೆಯ ದೃಷ್ಟಿಯಿಂದಾದರೂ ನೀರು ಕೊಡುವುದು ಬೇಡವೆ? ಅಲ್ಲಿಯ 34 ಹಳ್ಳಿಗಳಿಗೆ ನೀರು ಕೊಟ್ಟಿಲ್ಲ. ಅಲ್ಲಿ ಒಂದು ರೀತಿಯ ರಾಜಕೀಯ